ಶ್ರೀ ಕೆ.ಬಿ. ಕೋಳಿವಾಡ್: ಐದು ವರ್ಷದ ಮಾಹಿತಿ ಕೇಳಿದರೆ, ಪ್ರತಿ ವರ್ಷದ ಮಾಹಿತಿ ಇರಬೇಕಲ್ಲ.

ಡಾ॥ ಎಂ.ಹೆಚ್. ಅಂಬರೀಷ್: ಒಟ್ಟು ಮಾಹಿತಿ ಕೇಳಿದ್ದೀರಿ, ಒಟ್ಟು ಕೊಟ್ಟಿದ್ದೇನೆ.

ಶ್ರೀ ಕೆ.ಬಿ. ಕೋಳಿವಾಡ್: ಒಟ್ಟು ಮಾಹಿತಿ ಇಲ್ಲವೆಂದರೆ ನಾಳೆ ಕೊಡಿ. ನನ್ನದೇನು ತಕರಾರು ಇಲ್ಲ.

ಅಧ್ಯಕ್ಷರು: Specific ಆಗಿ ಅವರಿಗೆ ಬೇರೆ ಕಳುಹಿಸಿ ಕೊಡಿ. ಮುಂದಿನ ಪ್ರಶ್ನೆ ಮಾನಪ್ಪ ಡಿ. ವಜ್ಜಲ್.

ಐತಿಹಾಸಿಕ ಮತ್ತು ಪ್ರವಾಸಿ ತಾಣಗಳ ಅಭಿವೃದ್ಧಿ

183(3075); ಶ್ರೀ ಮಾನಪ್ಪ ಡಿ. ವಜ್ಜಲ್ (ಲಿಂಗಸುಗೂರು)

ಅ) ರಾಯಚೂರು ಜಿಲ್ಲೆ, ಲಿಂಗಸುಗೂರು ತಾಲ್ಲೂಕಿನ ಐತಿಹಾಸಿಕ ಪ್ರವಾಸಿ ತಾಣಗಳನ್ನು ಸರ್ಕಾರ ಗುರುತಿಸಿದೆಯೇ;

ಆ) ಹಾಗಿದ್ದಲ್ಲಿ,ಯಾವ ಯಾವ ಐತಿಹಾಸಿಕ ಹಾಗೂ ಪ್ರವಾಸಿ ತಾಣಗಳನ್ನು ಗುರುತಿಸಲಾಗಿದೆ;

ಇ) ಹಾಗಿದ್ದಲ್ಲಿ, ಗುರುತಿಸಲಾದ ಪ್ರದೇಶಗಳನ್ನು ಅಭಿವೃದ್ಧಿ ಪಡಿಸಲು ಸರ್ಕಾರವು ನಿಗದಿಪಡಿಸಿರುವ ಅನುದಾನವೆಷ್ಟು; ಈವರೆವಿಗೆ ಯಾವ್ಯಾವ ಪ್ರದೇಶಗಳನ್ನು ಅಭಿವೃದ್ಧಿ ಪಡಿಸಲಾಗಿದೆ (ಪೂರ್ಣ ವಿವರ ನೀಡುವುದು)?

ಶ್ರೀ ಆರ್.ವಿ. ದೇಶಪಾಂಡೆ (ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು)

ಅ) ಹೌದು.

ಆ) ಲಿಂಗಸುಗೂರು ತಾಲ್ಲೂಕಿನಲ್ಲಿ ಕೆಳಕಂಡ ಪ್ರದೇಶಗಳನ್ನು ಪ್ರವಾಸಿ ತಾಣಗಳಾಗಿ ಗುರುತಿಸಲಾಗಿದೆ.

1) ಹಟ್ಟಿ
2) ಮುದಗಲ್
3) ಮಸ್ಕಿ

ಇ) ಲಿಂಗಸುಗೂರು ತಾಲ್ಲೂಕಿನಲ್ಲಿ ಇಲಾಖೆಯು ಗುರುತಿಸಿರುವ ಹಾಗೂ ಇತರೆ ತಾಣಗಳಲ್ಲಿ ಕೈಗೊಂಡಿರುವ ಪ್ರವಾಸೋದ್ಯಮ ಅಭಿವೃದ್ಧಿ ಕಾಮಗಾರಿಗಳ ವಿವರ ಕೆಳಗಿನಂತಿದೆ:

(ರೂ. ಲಕ್ಷಗಳಲ್ಲಿ)

ಕ್ರ ಸಂ	ಕಾಮಗಾರಿ ಹೆಸರು	ಅಂದಾಜು ಮೊತ್ತ	ಬಿಡುಗಡೆ ಮಾಡಿದ ಮೊತ್ತ	ಬಾಕಿ ಮೊತ್ತ
1	ಬುದ್ದಿನ್ನಿ (ಸಾನಾಬಾಳ್) ಶ್ರೀ ಕ್ಷೇತ್ರ ಶ್ರೀಮಾನ್ ಮಾಧವತೀರ್ಥರ ಬೃಂದಾವನ ಸನ್ನಿಧಾನದಲ್ಲಿ ಯಾತ್ರಿನಿವಾಸ ನಿರ್ಮಾಣ	150.00	150.00	–
2	ಶ್ರೀ ಗುರು ಗುಂಟೇಶ್ವರ ಅಮರೇಶ್ವರ ದೇವಾಲಯದ ಬಳಿ ಯಾತ್ರಿ ನಿವಾಸ ನಿರ್ಮಾಣ	53.00	53.00	–
3	ಅಡಿವೇಶ ನಿರುಪಾದೇಶ್ವರ ಅಂಕಲಗಿ ಮಠದ ಬಳಿ ಯಾತ್ರಿನಿವಾಸ ನಿರ್ಮಾಣ	100.00	100.00	–
4	ಮಸ್ಕಿಯಲ್ಲಿನ ಅಶೋಕನ ಶಿಲಾ ಶಾಸನ ಪ್ರದೇಶದಲ್ಲಿ ಪ್ರವಾಸಿ ಸೌಲಭ್ಯಗಳ ಅಭಿವೃದ್ಧಿ	50.00	50.00	–
5	ಚಿತ್ತರಗಿಯ ಶ್ರೀ ವಿಜಯ ಮಹಂತೇಶ್ವರ ಶಾಖಾ ಮಠದ ಬಳಿ ಯಾತ್ರಿನಿವಾಸ ನಿರ್ಮಾಣ	60 00	60.00	–
6	ಸಂತೆಕಲ್ಲೂರು ಗ್ರಾಮದ ಶ್ರೀ ಘನಮಠೇಶ್ವರ ಸುಕ್ಷೇತ್ರದ ಬಳಿ ಯಾತ್ರಿನಿವಾಸ ನಿರ್ಮಾಣ	60.00	60 00	–
7	ಲಿಂಗಸಗೂರು ಮುಖ್ಯರಸ್ತೆಯಿಂದ ಜಲದುರ್ಗ ಕೋಟೆಯವರೆಗೆ ಸಂಪರ್ಕ ರಸ್ತೆ ಅಭಿವೃದ್ಧಿ	360.00	350.00	10.00
8	ಮಸ್ಕಿ ಪಟ್ಟಣದಿಂದ ಮಲ್ಲಿಕಾರ್ಜುನ ದೇವಸ್ಥಾನದವರೆಗೆ ಸಂಪರ್ಕರಸ್ತೆ ಅಭಿವೃದ್ಧಿ	50 00	50.00	–
ಒಟ್ಟು		**383 00**	**873.00**	**10.00**

ಶ್ರೀ ಮಾನಪ್ಪ ಡಿ. ವಜ್ಜಲ್: ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದಾರೆ, ಇನ್ನು ಅನೇಕ ಪ್ರವಾಸಿ ತಾಣಗಳ ಹೆಸರೇ ಕೊಟ್ಟಿಲ್ಲ. ನಾವು ಪ್ರವಾಸಿ ತಾಣಗಳು ಲಿಂಗಸಗೂರು ತಾಲ್ಲೂಕು ಮತ್ತು ರಾಯಚೂರು ಜಿಲ್ಲೆಯಲ್ಲಿ ಎಷ್ಟು ಇವೆ ಎಂದು ಕೇಳಿದ್ದೇನೆ. ಯಾತ್ರಿ ನಿವಾಸದವರು ಕೊಟ್ಟಂತಹ ಸ್ಥಳಗಳನ್ನು ಮಾತ್ರ ಇಲ್ಲಿ ಗುರುತಿಸಿ ಕೊಟ್ಟಿದ್ದಾರೆ. ಇನ್ನು ಕೆಲವೊಂದು important ಇರುವಂತಹ ಪ್ರವಾಸಿ ಸ್ಥಳಗಳನ್ನು ಬಿಟ್ಟಿದ್ದಾರೆ. ಮುದುಗಲ್ ಕೋಟೆ ಇದೆ, ಜಲದುರ್ಗ ಕೋಟೆ ಇದೆ, ಲಿಂಗಸುಗೂರು ತಾಲ್ಲೂಕಿನ ಪಟ್ಟಣದಲ್ಲಿರತಕ್ಕಂತಹ ದೊಡ್ಡ ಕೆರೆ ಇದೆ. ಇದುವರೆಗೆ ಒಂದು ನಯಾಪೈಸೆ ಹಣ ಬಿಡುಗಡೆಯಾಗಿಲ್ಲ.

ಅಧ್ಯಕ್ಷರು: ಯಾವ್ಯಾವುದು ಗುರುತಿಸಿದ್ದಾರೆ ಅವುಗಳನ್ನು ಹೇಳಿದ್ದಾರೆ. ಗುರುತಿಸದೆ ಇರುವುದು ಹೇಳಿಲ್ಲ, ನೀವು ಅವುಗಳನ್ನೂ ಗುರುತಿಸಿ ಎಂದು ಒಂದು ಪ್ರಶ್ನೆ ಕೇಳಿ.

ಶ್ರೀ ಮಾನಪ್ಪ ಡಿ. ವಜ್ಜಲ್: ಮುದುಗಲ್ ಕೋಟೆ ಮತ್ತು ಜಲದುರ್ಗ ಕೋಟೆ ಮತ್ತು ಸಜ್ಜನ ಶ್ರೀ ಶರಣಮ್ಮ ದೇವಸ್ಥಾನದಲ್ಲಿ ಇವತ್ತಿನವರೆಗೂ ಯಾವುವೂ ಅಭಿವೃದ್ಧಿಯಾಗಿಲ್ಲ. ಇವುಗಳನ್ನು ಗುರುತಿಸಬೇಕು. ಲಿಂಗಸಗೂರು ಕೆರೆ ಪಟ್ಟಣದಲ್ಲಿ ದೊಡ್ಡ ಕೆರೆ ಇದೆ, ಆ ಕೆರೆಯನ್ನೂ ಗುರುತಿಸಿಲ್ಲ.

ಅಧ್ಯಕ್ಷರು: ಚರ್ಚೆ ಬೇಡ ಆ ಕೆರೆಯನ್ನೂ ಗುರುತಿಸಿ ಎಂದು ಕೇಳಿ.

ಶ್ರೀ ಮಾನಪ್ಪ ಡಿ. ವಜ್ಜಲ್: ಸರ್ಕಾರದ ಇತಿಹಾಸದ ದಾಖಲೆಗಳಲ್ಲಿ ಇದೆ. ಅವರು ವರದಿಯಲ್ಲಿ ಕೊಟ್ಟಿಲ್ಲ.

ಅಧ್ಯಕ್ಷರು: ಇದೆಯಾ ಇದ್ದರೆ ಹೇಳಿ.

ಶ್ರೀ ಆರ್.ವಿ. ದೇಶ್‌ಪಾಂಡೆ: ಮಾನ್ಯ ಅಧ್ಯಕ್ಷರೆ, ತಾವು ಸದಸ್ಯರಿಗೆ ಸರಿಯಾದ ರೀತಿಯಲ್ಲಿ ಮಾರ್ಗದರ್ಶನ ಮಾಡಿದಿರಿ. ರಾಜ್ಯದಲ್ಲಿ 319 ಪ್ರವಾಸಿ ತಾಣಗಳಿವೆ. ಒಂದು tourist destination ಅನ್ನು identify ಮಾಡಬೇಕಾದರೆ, ಅದಕ್ಕೆ ಒಂದು procedure ಇದೆ. ನಮ್ಮ ಇಲಾಖೆಯ identification ಪ್ರಕಾರ

ಹಟ್ಟಿ, ಮುದಗಲ್, ಮಸ್ಕಿ ಇದೆ. ತಾವು ಮುದುಗಲ್ ಕೋಟೆ, ಲಿಂಗಸಗೂರು ಕೆರೆ ಸೇರಿಸಬೇಕೆಂದು ಸಲಹೆ ಕೊಡುತ್ತಿದ್ದೀರಿ. ಅದರ ಬಗ್ಗೆ ನಾನು examine ಮಾಡಿಸುತ್ತೇನೆ, report ತರಿಸುತ್ತೇನೆ. ಅದು ಪ್ರವಾಸೋದ್ಯಮ ಇಲಾಖೆಯ ಚೌಕಟ್ಟಿನಲ್ಲಿ ಬರುವುದಾದರೆ ಖಂಡಿತವಾಗಿ ಅವುಗಳನ್ನು ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ತಾವು ಹಣ ಬಿಡುಗಡೆ ಮಾಡಿಲ್ಲವೆಂದು ಹೇಳಿದಿರಿ, ನಾವು ನಿಮಗೆ 2013–14, 2014–15 ಕೂಡಿ ಮೂರು ಕೋಟಿ 58 ಲಕ್ಷ ರೂಪಾಯಿ ನಿಮ್ಮ ಲಿಂಗಸಗೂರು constituency ಗೆ ಬಿಡುಗಡೆ ಮಾಡಿದ್ದೇವೆ.

ಅಧ್ಯಕ್ಷರು: ಆಯಿತು. ರಾಜೀವ್, ಇಲ್ಲ, ಈಶ್ವರ ಭೀಮಣ್ಣ ಖಂಡ್ರೆ ಇಲ್ಲ, ಹೆಚ್.ಸಿ. ಬಾಲಕೃಷ್ಣ.

ಕುಡಿಯುವ ನೀರಿನ ಸಮಸ್ಯೆ

186(2134); ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ)

ಅ) ಮಾಗಡಿ ಕ್ಷೇತ್ರ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಕಳೆದ 3 ವರ್ಷಗಳಲ್ಲಿ ಯಾವ ಯಾವ ಯೋಜನೆಗಳಿಗೆ ಎಷ್ಟೆಷ್ಟು ಅನುದಾನವನ್ನು ಒದಗಿಸಲಾಗಿದೆ;

ಇ) ಯಾವ ಯೋಜನೆಯಡಿಯಲ್ಲಿ ಎಲ್ಲೆಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ; ಇವುಗಳಲ್ಲಿ ಪೂರ್ಣ ಗೊಂಡಿರುವ ಕಾಮಗಾರಿ, ವೆಚ್ಚವಾಗಿರುವ ಅನುದಾನ ಹಾಗೂ ಬಿಡುಗಡೆ ಯಾಗಬೇಕಾಗಿರುವ ಅನುದಾನವೆಷ್ಟು;

ಈ) ಬಿಡುಗಡೆಯಾಗಬೇಕಾಗಿರುವ ಅನುದಾನವನ್ನು ಯಾವಾಗ ಬಿಡುಗಡೆ ಮಾಡಲಾಗುವುದು ಮತ್ತು ಅಪೂರ್ಣ ಕಾಮಗಾರಿಗಳನ್ನು ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು (ಸಂಪೂರ್ಣ ವಿವರ ನೀಡುವುದು)?